# ಮಾನಿಸನಿಲ್ಲದೆ ನೀನೀಶನೆಂತಾದೆ?

ಇದು ದೇವಮಾನವರ ಕಾಲ. ಕ್ರಿಸ್ತ, ಮಹಮದರು ತಮ್ಮನೆಂದೂ 'ದೇವ'ರೆಂದು ಹೇಳಿಕೊಳ್ಳಲಿಲ್ಲ. ದೇವದೂತರೆಂದು ಹೇಳಿಕೊಳ್ಳುವ ಸೌಜನ್ಯ ತೋರಿದರು. ತಮ್ಮ ಅರಿವಿನ ಮಿತಿಯೊಳಗೆ ಅವರು ಬದುಕಿದ್ದ ಕಾಲ ಘಟ್ಟದಲ್ಲಿ ಮಾನವತೆಯ ಪರವಾಗಿ ಹೋರಾಡಿದರು. ಈ ಹೋರಾಟದ ಹಾದಿಯಲ್ಲಿ ಅವರು ಅನುಭವಿಸಿದ ಪ್ರತಿರೋಧ ಅಪಾರ. ಅವರು ತಮ್ಮ ಜೀವಿತದ ಅವಧಿಯಲ್ಲಿ ಒಂದು ನೆಲೆ ನಿಂತವರಲ್ಲ; ಒಂದು ಸುಖ ಕಂಡವರಲ್ಲ. ಕ್ರಿಸ್ತನ ಅಂತ್ಯವಂತೂ ಕರುಣಾಮಯವಾದುದು; ಹಿಂಸಾಪೂರಿತವಾದುದು. ಅವರು ಮನುಷ್ಯರಾಗಿ ಹುಟ್ಟಿ, ಮನುಷ್ಯರಾಗಿ ಬೆಳೆದು, ಸಮಾನತೆಯ ಸಾಧನೆಗಾಗಿ ಮಾನವ ಪರವಾಗಿ ಚಿಂತಿಸಿದರು. ಅದರಲ್ಲೇ ತಮ್ಮ ಜೀವನದ ಗುರಿಯನ್ನು ಗ್ರಹಿಸಿದ್ದರು. ಬುದ್ಧನು ಶ್ರೀಮಂತ ರಾಜನಾಗಿ ಜನಿಸಿ, ಶ್ರೀಮಂತ ಬದುಕನ್ನು ನಿರಾಕರಿಸುತ್ತಾ, ಬದುಕಿನ ನಿಜವಾದ ರಹಸ್ಯವನ್ನು ಶೋಧಿಸಲೋಸುಗ ಪ್ರಜ್ಞಾಪೂರ್ವಕವಾಗಿ ಕಷ್ಟ ಪರಂಪರೆಗಳನ್ನು ಮೈ ಮೇಲೆಳೆದುಕೊಂಡವನು. ಈ ಕಾರಣದಿಂದಾಗಿ ಯುಗಗಳು ಕಳೆದರೂ ಇವರು ಮಹಾ ಮಾನವರೆಂದು ಕರೆಸಿಕೊಂಡು, ಜಗತ್ತಿನಾದ್ಯಂತ ಕೋಟ್ಯಂತರ ಅನುಯಾಯಿಗಳನ್ನು ಇಂದಿಗೂ ಹೊಂದಿದ್ದಾರೆ. ಕಾರಣ: ಅವರು ದೇವರು ಎಂಬ ಅಮೂರ್ತ ಕಲ್ಪನೆಯನ್ನು ಶಕ್ತಿಯೆಂದು ಪರಿಭಾವಿಸಿ ಅದರ ಹುಡುಕಾಟದ ಮಾರ್ಗದಲ್ಲಿ ನಡೆದರು. ಅವರ ನಡೆಯಲ್ಲಿ 'ಏನೋ ಇರಬೇಕು' ಎಂದು ಅವರ ಅನುಯಾಯಿಗಳು ಇಂದಿಗೂ ನಂಬಿ ಅವರು ನಡೆದ ದಾರಿಯಲ್ಲಿ ತಾವೂ ಪರಿಕ್ರಮಿಸಲು ಯತ್ನಿಸುತ್ತಿದ್ದಾರೆ.

ಆದರೆ ತಾವೇ ದೇವರೆಂದು ಕರೆದುಕೊಳ್ಳುವ ಸ್ವಯಂ ಘೋಷಿಸಿಕೊಳ್ಳುವ ಆಧುನಿಕ ದೇವ ಮಾನವರು ಇಂದು ಎಲ್ಲೆಡೆ ಕಾಣಬರುತ್ತಿದ್ದಾರೆ. ಇವರು ಭಕ್ತಿಯೆಂಬ ಅಫೀಮನ್ನು (ಅಥವಾ ನಿಜವಾದ ನಾರ್ಕೋಟಿಕ್‌ಗಳನ್ನು) ದುರ್ಬಲ ಹೃದಯಿಗಳಿಗೆ, ವೈಚಾರಿಕ ಮನೋಧರ್ಮವಿಲ್ಲದ ಮೂಢರಿಗೆ ತಿನ್ನಿಸಿ ದುಡ್ಡು ಮಾಡುವ ಹೈಟೆಕ್ ದಂದೆಯಲ್ಲಿ ತೊಡಗಿದ್ದಾರೆ. ಪ್ರಕೃತಿಯ ನಡುವೆ, ಹೊಲಗದ್ದೆಗಳಲ್ಲಿ ದುಡಿಯುವ ಶ್ರಮ ಜೀವಿಗಳಾಗಲೀ ಅಥವಾ ಕಾರ್ಖಾನೆಗಳಲ್ಲಿ ಕೈ ಮೈ ಮಸಿ ಮಾಡಿಕೊಂಡು ಬೆವರು ಸುರಿಸುವ ದೇಶ ಕಟ್ಟುವ ಪ್ರಜೆಗಳು ಇಂಥ ದೇವ ಮಾನವರ ಭಕ್ತರಲ್ಲವೆಂಬುದು ಬಹುಮುಖ್ಯ ಸಂಗತಿ. ಆ ಭಕ್ತರಲ್ಲಿ ಬಹುಪಾಲು ಪದವಿ ಪಡೆದ ಶ್ರೀಮಂತ ಅಕ್ಷರಸ್ಥರೇ! ಅವರು ಪಡೆದ ಪದವಿಗಳು ಅವರ ಅರಿವನ್ನು ವಿಕಾಸಗೊಳಿಸಿ ನಿಜವಾದ ಆತ್ಮದ ಎಚ್ಚರವನ್ನು ಮೂಡಿಸಿಲ್ಲವೆಂಬುದು ಅಷ್ಟೇ ಸತ್ಯ. ಜೊತೆಗೆ, ನಮ್ಮ ಶಿಕ್ಷಣ ವ್ಯವಸ್ಥೆ– ನಮ್ಮ ಪಠ್ಯಕ್ರಮಗಳು– ಎಂಥ ಅವೈಜ್ಞಾನಿಕ, ಅವೈಚಾರಿಕ ಸತ್ವವನ್ನು ಹೊಂದಿವೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಕ್ರಿಸ್ತ, ಮಹಮದರು ತಾವು ದೇವದೂತರೆಂದರು. ಬುದ್ಧನು ದೇವರ ಅಸ್ತಿತ್ವದ ಬಗ್ಗೆಯೇ ಅನುಮಾನ ತಳೆದ; ತನಗೆ ದೇವರು, ಸ್ವರ್ಗ– ನರಕಗಳ ಬಗ್ಗೆ ಗೊತ್ತಿಲ್ಲವೆಂದು ಸತ್ಯ ನುಡಿದ. ಇಲ್ಲೆಲ್ಲ ಒಂದು ಸತ್ಯ ಸ್ಪಷ್ಟವಾಗಿ ಗೋಚರಿಸುತ್ತದೆ: ಒಂದು ಅತೀತ ಶಕ್ತಿ ಇರಬಹುದೆಂದು ನಂಬಿ ಅದರ ಶೋಧಕ್ಕೆ ಹೊರಟವರು ಕೆಲವರಾದರೆ, ಅಂಥ ಅತೀತ ಶಕ್ತಿಯೆಂಬುದು ಇಲ್ಲ, ಅದು ನಮ್ಮೊಳಗೆ ಆವಿರ್ಭವಿಸಿಕೊಳ್ಳಬಹುದಾದ ಮಾನವ ಸಂಕಲ್ಪ ಶಕ್ತಿಯೆಂದು ಬಗೆದವರು ಕೆಲವರು. ಈ ಇಬ್ಬಗೆಯ ಜಿಜ್ಞಾಸೆ– ಸಂಘರ್ಷಗಳಲ್ಲಿ ಜಗತ್ತಿನ ಧರ್ಮಶಾಸ್ತ್ರಗಳು– ತತ್ವಶಾಸ್ತ್ರಗಳು ಬೆಳೆದಿವೆ. ದೇವರಿರಬಹುದೆಂದು ಬಗೆದು ಆ ನಂಬಿಕೆಗೆ ಒಂದು ತತ್ವ ಆಕಾರ ಕೊಟ್ಟು ಸೃಷ್ಟಿ ಮಾಡಿದವರನ್ನು– ಆ ಬಗೆಯ ಸೃಷ್ಟಿಯೇ ಅವೈಚಾರಿಕ ಮೌಢ್ಯದ ಫಲವೆಂದು ಕರೆದವರನ್ನು ನಾಸ್ತಿಕರೆಂದು ಹೆಸರಿಸಿ ಸಮಷ್ಟಿಯಿಂದ ದೂರವಿಡಲಾಯಿತು. ನಾಸ್ತಿಕ ಎಂದು ಕರೆದದ್ದು ಅಷ್ಟೇ ಅಲ್ಲ, ಅವರನ್ನು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಧರ್ಮದ್ರೋಹಿಗಳೆಂದು ಜರಿಯಲಾಯಿತು.

ಆದರೆ ಒಂದಂತು ಸತ್ಯ. ದೇವರನ್ನು ಸೃಷ್ಟಿ ಮಾಡಿದವನು ಮನುಷ್ಯ! ಈ ಸತ್ಯ ಆಸ್ತಿಕ– ನಾಸ್ತಿಕರಿಬ್ಬರೂ ಒಪ್ಪುವ ಸಂಗತಿ. ಅದರಲ್ಲೂ ಬದುಕನ್ನು ತಮ್ಮ ಅನುಭವದ ಶೋಧಿಸಿಕೊಂಡ ಸಂತ ಕವಿಗಳು ಈ ಅಂಶವನ್ನು ಸ್ಪಷ್ಟವಾಗಿ ಕಂಡಿರಿಸಿದ್ದಾರೆ. ನಮ್ಮ ಸರ್ವಜ್ಞನ ಈ ವಚನವನ್ನು ಗಮನಿಸಿ:

ಮಾನಿಸನಿಲ್ಲದೆ ನೀನೀಶನೆಂತಾದೆ
ನೀನೀಶ ನೀಶನೆನ ಬೇಡ! ಲೋಕಕ್ಕೆ
ಮಾನಿಸನೀಶ ಸರ್ವಜ್ಞ

ಸರ್ವಜ್ಞನು ಕೂಡ ಆಸ್ತಿಕ ಮಹಾಶಯನೆ. ಆದರೆ ಅವನ ವಿವೇಚನಾ ಪ್ರಜ್ಞೆ ವಿವೇಕದಿಂದ ಕೂಡಿರುವಂಥದು. ಅವನಿಗೆ ದೇವರು 'ಮಾನಿಸ'ನಿಗಿಂತ ದೊಡ್ಡವನಲ್ಲ ಎಂದು ಗೊತ್ತು. ಆದರೆ 'ಮಾನಿಸ'ನಿದ್ದರೆ ಮಾತ್ರ ದೇವರು, ಇಲ್ಲದಿದ್ದಲ್ಲಿ ಇಲ್ಲ ಎಂಬ ಸಹಜ ಸತ್ಯದ ಅರಿವಿದೆ. ತನ್ನ ನೆಮ್ಮದಿಗೆ, ಏಕಾಂತ ಚಿಂತನೆಗೆ, ಅತೀತ ಶಕ್ತಿಯ ಶೋಧಕ್ಕೆ ಒಂದು ಕಲ್ಪನೆಯ ಕೇಂದ್ರ ಬೇಕು, ಆ ಕೇಂದ್ರವನ್ನು ದೇವರೆಂದು ಕರೆದು 'ಮಾನಿಸ' ದೇವರನ್ನು ರೂಪಿಸಿಕೊಂಡ. ತಾನೇ ರೂಪಿಸಿಕೊಂಡ ಕೇಂದ್ರದ ದಾಸನಾದ. ತನ್ನ ಸುತ್ತ ಭಕ್ತಿ– ನಂಬಿಕೆಗಳ ಹಗ್ಗಗಳನ್ನು ಬಿಗಿದುಕೊಂಡ.

ಸರ್ವಜ್ಞನಿಗಿರುವ ವಿವೇಕ; ಬುದ್ಧ, ಕ್ರಿಸ್ತ, ಮಹಮದರಿಗಿರುವ ಜನಪರ ಆಶಯ– ತಾನೇ ಸ್ವಯಂಭುವೆಂದು ಹೇಳಿಕೊಳ್ಳುವ ದೇವಮಾನವರಿಗೆ ಇರುವುದಿಲ್ಲ. ಹಾಗೆ ಹೇಳಿಕೊಳ್ಳುವುದು ಅಹಂಕಾರದ ಸಂಕೇತವಾಗುತ್ತದೆ. ಇಂಥ ದೇವಮಾನವರನ್ನು ನಂಬಿ ಆರಾಧಿಸುವುದು ಮೌಢ್ಯದ ಪರಮಾವಧಿಯಾಗುತ್ತದೆ.

**■ ಶಿಕಾಕು**

## ಮಾತೇ ಮುತ್ತು

★ ಅಗ್ನಿಗೆ ತಂಪುಂಟೆ? ವಿಷಕ್ಕೆ ರುಚಿಯುಂಟೆ? ದಾಳಿಕಾರಂಗೆ ಧರ್ಮವುಂಟೆ? ಕನ್ನಗಳ್ಳಂಗೆ ಕರುಳುಂಟೆ ಹೇಳಾ ಲಿಂಗವೇ?
–ಅಲ್ಲಮ ಪ್ರಭು

★ ಆವೇಶ, ಉತ್ಸಾಹ, ಸ್ಫೂರ್ತಿ ಇದೆಯೆಂದು ನುಗ್ಗುವುದಲ್ಲ. ನಮ್ಮ ಪ್ರತಿ ನಡೆಯ ಸಾಧಕ– ಬಾಧಕಗಳನ್ನು ವಿಶ್ಲೇಷಿಸದಿದ್ದರೆ ಹೋರಾಟ ದಿಕ್ಕುತಪ್ಪುತ್ತದೆ ಅಥವಾ ನಿಲ್ಲುತ್ತದೆ.
–ಸೌಲ್ ಅಲೆನ್‌ಸ್ಕಿ

★ ಅಪಮಾನವನ್ನು ಪ್ರಕಟಿಸಬಾರದು.
–ಲೋಕೋಕ್ತಿ

★ ತಾಳ್ಮೆಗಿಂತ ಹೆಚ್ಚು ಶ್ರೇಷ್ಠವಾದ ಹಾಗೂ ಉತ್ತಮವಾದ ಆಶೀರ್ವಾದ ಇನ್ನೊಂದಿಲ್ಲ.
–ಮುಹಮ್ಮದ್ ಪೈಗಂಬರ್

★ ಗುಣಗಳಿಂದ ಉತ್ತಮನಾಗಬೇಕಲ್ಲದೆ ಜಾತಿಯ ಮೇಲ್ಮೆಯಿಂದ ಅಲ್ಲ. ಕ್ಷೀರ ಸಮುದ್ರದಲ್ಲಿ ಹುಟ್ಟಿದ ಕಾಲಕೂಟವು ಉತ್ತಮವೇನು?
–ಮಹಾಭಾರತ

★ ಎಲ್ಲಕ್ಕಿಂತ ದೊಡ್ಡ ತಪ್ಪು ನಮ್ಮ ತಪ್ಪನ್ನು ತಿಳಿಯದಿರುವುದೇ.
–ಥಾಮಸ್ ಕಾರ್ಲೈಲ್

★ ತನ್ನೊಳಗಿನ ಅರಿವು ತನ್ನಲ್ಲಿ ತೋರಿದಲ್ಲದೆ ಅನ್ಯರಲ್ಲಿ ತೋರಬಲ್ಲದೆ?
–ದೇವರ ದಾಸಿಮಯ್ಯ

★ ಮನೋ ವಿಕಾರಕ್ಕೆ ಕಾರಣ ತಿಳಿದಿದ್ದರೂ ವಿಕಾರ ವಶರಾಗದವರೇ ನಿಜವಾದ ಧೀರರು.
–ಕಾಳಿದಾಸ

★ ಧರ್ಮ 'ದಯಾ' ಮೂಲವಾಗಿರಬೇಕೇ ಹೊರತು, 'ಭಯ' ಮೂಲವಾಗಿರಬಾರದು.
–ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ

★ ಪೂರ್ಣ ಆತ್ಮವಿಶ್ವಾಸಿಯೇ ನಿಸ್ಪೃಹನಾಗಿ ಸಾಧನೆಯಲ್ಲಿ ತಲ್ಲೀನನಾಗಬಲ್ಲ.
–ರವೀಂದ್ರನಾಥ ಠಾಗೋರ್

★ ಸೊಗಸಾಗಿ ಹೇಳುವುದಕ್ಕಿಂತಲೂ, ಚೆನ್ನಾಗಿ ಮಾಡುವುದು ಲೇಸು.
–ಬೆಂಜಮಿನ್

★ ಗೂಳಿ ನಡೆವ ಹೆಜ್ಜೆ ತೋರುವುದಲ್ಲದೆ, ಗಾಳಿಯ ಹೆಜ್ಜೆ ತೋರುವುದೇ?
–ಭರತೇಶ ವೈಭವ

★ ತಿನ್ನಬಹುದಾದರೆ ಸಿಟ್ಟನ್ನು ತಿನ್ನು.
ಅಮೃತವಾಣಿ